ಮದ್ಯದಂಗಡಿಗಳ ಮಂಜೂರಾತಿಗೆ ಕರ್ನಾಟಕ ಅಬಕಾರಿ (ವಿದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರ ನಿಯಮ 12 ರನ್ವಯ ಜನಸಂಖ್ಯೆ ಆಧರಿಸಿ ಕೋಟಾ ನಿಗಧಿಪಡಿಸಲಾಗುತ್ತದೆ.

ಎಂ.ಎಸ್.ಐ.ಎಲ್ ಮದ್ಯದಂಗಡಿಗಳಿಗೆ ನಿಯಮ 12 ಅನ್ವಯಿಸುವುದಿಲ್ಲ.

ಈ) ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು ನಿಯಮಗಳು, 1967 ರ ನಿಯಮ 5(1) ನ್ನು ಉಲಂಘಿಸಿರುವ 02 ಪ್ರಕರಣಗಳು ಇರುತ್ತವೆ. ವಿವರಗಳು ಈ ಕೆಳಕಂಡಂತಿದೆ:-

1) ಶ್ರೀ ಕೆ. ನಾಗೇಶ, ಸಿಎಲ್-9 ಸನ್ನದುದಾರರು, ಸಿಂಗನ ಮನೆ, ಭದ್ರಾವತಿ ತಾಲ್ಲೂಕು ಈ ಸನ್ನದು ಕಟ್ಟಡದಿಂದ 50ಮೀಟರ್ ಅಂತರದಲ್ಲಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ ಇರುತ್ತದೆ.

2) ಶ್ರೀಮತಿ ಉಷಾದೇವಿ, ಸಿಎಲ್-9 ಸನ್ನದು, ಎಂ.ಕೆ.ನಂ.633/109/10, ಎಂ.ಎನ್. ರಸ್ತೆ, ಶಿಕಾರಿಪುರ ಈ ಸನ್ನದು ಕಟ್ಟಡದಿಂದ 69 ಮೀಟರ್ ಅಂತರದಲ್ಲಿ ಶಿಕ್ಷಣ ಇಲಾಖೆಯ ಸಮೂಹ ಸಂಪನ್ಮೂಲ ಕೇಂದ್ರ ಇರುತ್ತದೆ.

ಮೇಲ್ಕಂಡ 02 ಪ್ರಕರಣಗಳಿಗೆ ಸನ್ನದು ಸ್ಥಳಾಂತರಿಸುವಂತೆ ಅಬಕಾರಿ ಉಪ ಆಯುಕ್ತರು, ಶಿವಮೊಗ್ಗ ಜಿಲ್ಲೆ ಇವರು ನೋಟೀಸ್ ನೀಡಿದ್ದು, ಸದರಿ ನೋಟೀಸಿಗೆ ಅಬಕಾರಿ ಆಯುಕ್ತರ ಮುಂದೆ ಅಪೀಲು ಸಲ್ಲಿಸಿದ್ದು, ಅಬಕಾರಿ ಆಯುಕ್ತರು ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ. ಸನ್ನದುದಾರರು ಅಬಕಾರಿ ಆಯುಕ್ತರ ಆದೇಶದ ವಿರುದ್ಧ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಮೇಲ್ಮನವಿ ದಾಖಲಿಸಿದ್ದು, ಸದರಿ ನ್ಯಾಯಾಧೀಕರಣವು ತಡೆಯಾಜ್ಞೆ ನೀಡಿರುತ್ತದೆ.

ಅಗಸವಳ್ಳಿ ಗ್ರಾಮದ ಸ.ನಂ. 167 ರಲ್ಲಿ ಒತ್ತುವರಿ

486 (476) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ ಗ್ರಾಮದ ಸರ್ವೆ ನಂಬರ್ 167 ರಲ್ಲಿ ಕೆ.ಪಿ.ಸಿ.ಯವರು ಲೇಔಟ್ ಮೂಲಕ ಬಡಾವಣೆ ಮಾಡಿ,

ನಿವೇಶನ ರಚಿಸಲಾಗಿದ್ದು, ಅಂಚೆ ಕಛೇರಿ, ಬಸ್ ನಿಲ್ದಾಣ ಇತ್ಯಾದಿ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಿದ ಪ್ರದೇಶಗಳನ್ನು ಯಾವ ರೀತಿ ರಕ್ಷಿಸಲಾಗಿದೆ;

ಆ) ಈ ಬಡಾವಣೆಯಲ್ಲಿರುವ ಅನಧಿಕೃತ ಒತ್ತುವರಿ ತೆರವು ಗೊಳಿಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ;

ಇ) ಈ ಪ್ರದೇಶವನ್ನು ಗ್ರಾಮ ಪಂಚಾಯತಿ ಖಾತೆಗಳಲ್ಲಿ ನಮೂದಿಸಲಾಗಿದ್ದರೆ ಬಡಾವಣೆ ನಕಾಶೆಯೊಂದಿಗೆ ಮಾಹಿತಿ ಒದಗಿಸುವುದು;

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಿದ ಪ್ರದೇಶಗಳಲ್ಲಿ ಅಂಚೆ ಕಛೇರಿ, ಬಸ್ ನಿಲ್ದಾಣಗಳಿಗೆ ಮೀಸಲಿಟ್ಟಿರುವ ಪ್ರದೇಶ ಒತ್ತುವರಿಯಾಗಿ ರೈತರು ಉಳುಮೆ ಮಾಡಿರುತ್ತಾರೆ. ಸಂಬಂಧಪಟ್ಟ ಒತ್ತುವರಿದಾರರಿಗೆ ಗ್ರಾಮ ಪಂಚಾಯಿತಿ ಸಭೆಯ ನಡವಳಿಯ ತೀರ್ಮಾನದಂತೆ ತೆರವು ಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ನಿರಾಶ್ರಿತರಿಗೆ ಕಾಯ್ದಿರಿಸಿರುವ ನಿವೇಶನ ಜಾಗದಲ್ಲೂ ಅತಿಕ್ರಮ ಒತ್ತುವರಿಯಾಗಿದ್ದು, ಈ ವರ್ಷದಲ್ಲಿ ತೆರವುಗೊಳಿಸಲು ಕ್ರಮ ವಹಿಸಲಾಗಿದೆ.

ಇ) ಒಟ್ಟು 91 ಎಕರೆಯಲ್ಲಿ 225 ನಿರಾಶ್ರಿತ ಫಲಾನುಭವಿಗಳಿಗೆ ನಿವೇಶನ ಹಂಚಿದ್ದು, ಇದರಲ್ಲಿ 99 ಜನ ಖಾತೆ ಮಾಡಿಸಿದ್ದು, ಉಳಿದ ಫಲಾನುಭವಿಗಳು ಖಾತೆ ಮಾಡಿಸಿಕೊಂಡಿರುವುದಿಲ್ಲ. ಖಾತೆ ಮಾಡಿಸಿ ಕೊಳ್ಳುವಂತೆ ತಿಳುವಳಿಕೆ ನೀಡಲಾಗಿರುತ್ತದೆ. 2004–05ನೇ ಸಾಲಿನಲ್ಲಿ ಕೆ.ಪಿ.ಸಿ. ರವರು ಉಳಿದ ಜಾಗವನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ವಹಿಸಿರುತ್ತಾರೆ. ಈ ಪ್ರದೇಶವನ್ನು ಗ್ರಾಮ ಪಂಚಾಯಿತಿಯಲ್ಲಿರುವ ಸ್ಥಿರಾಸ್ತಿ ವಹಿಯಲ್ಲಿ ನಮೂದಿಸಲಾಗಿದ್ದು, ಬಡಾವಣೆ ನಕಾಶೆಯನ್ನು ಲಗತ್ತಿಸಿದೆ.


CHILDREN PARK